# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 440

02. ಮಾನ್ಯ ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ.ಎಂ.
(ವಿಧಾನ ಸಭೆಯಿಂದ ಚುನಾಯಿತರಾದವರು)

03. ಉತ್ತರಿಸುವ ದಿನಾಂಕ : 16-12-2021

04. ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೆಂಗಳೂರು ನಗರದಲ್ಲಿ ಕಳೆದ 02 ವರ್ಷಗಳಲ್ಲಿ ಎಷ್ಟು ಸೈಬರ್ ಅಪರಾಧ ಮತ್ತು ಆರ್ಥಿಕ ಅಪರಾಧ ಪ್ರಕರಣಗಳು ದಾಖಲಾಗಿದೆ; ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ;</td><td rowspan="2">ಬೆಂಗಳೂರು ನಗರದಲ್ಲಿ ವರ್ಷವಾರು ದಾಖಲಾದ ಸೈಬರ್ ಅಪರಾಧ ಮತ್ತು ಆರ್ಥಿಕ ಅಪರಾಧ ಪ್ರಕರಣಗಳು ಹಾಗೂ ಸದರಿ ಪ್ರಕರಣಗಳಲ್ಲಿ ಪತ್ತೆ ಹಚ್ಚಲಾದ ಆರೋಪಿಗಳ ಅಂಕಿ ಅಂಶಗಳು ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ವರ್ಷವಾರು</th><th>ದಾಖಲಾದ ಸೈಬರ್ ಅಪರಾಧ ಪ್ರಕರಣಗಳು</th><th>ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ</th></tr>
<tr><td>01.</td><td>2019</td><td>10497</td><td>107</td></tr>
<tr><td>02.</td><td>2020</td><td>8818</td><td>768</td></tr>
<tr><td>03.</td><td>2021 (30.11.2021)</td><td>5480</td><td>501</td></tr>
</table>
<table>
<tr><th>ಕ್ರ. ಸಂ.</th><th>ವರ್ಷವಾರು</th><th>ದಾಖಲಾದ ಆರ್ಥಿಕ ಅಪರಾಧ ಪ್ರಕರಣಗಳು</th><th>ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ</th></tr>
<tr><td>01.</td><td>2019</td><td>56</td><td>39</td></tr>
<tr><td>02.</td><td>2020</td><td>74</td><td>41</td></tr>
<tr><td>03.</td><td>2021 (30.11.2021)</td><td>123</td><td>44</td></tr>
</table>
</td></tr>
<tr><td>ಆ</td><td>ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿರುವ ಬೆಂಗಳೂರು ನಗರದಲ್ಲಿ, ಹಾಲಿ ಒಟ್ಟು ಎಷ್ಟು ಸೈಬರ್ ಮತ್ತು ಆರ್ಥಿಕ ಅಪರಾಧಗಳು ಕಂಡು ಬಂದಿದೆ; ಪೊಲೀಸ್ ಠಾಣೆಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿದೆ;</td></tr>
<tr><td>ಇ</td><td>ಈ ಎಲ್ಲಾ ಠಾಣೆಗಳಿಗೂ ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿ ಸಾಧನ, ಸಲಕರಣೆ ಮತ್ತು ಯಂತ್ರೋಪಕರಣಗಳು ಮುಂತಾದ ಮೂಲ ಸೌಕರ್ಯವನ್ನು ಒದಗಿಸಲಾಗಿದೆಯೇ;</td><td>ಬೆಂಗಳೂರು ನಗರದಲ್ಲಿ ಒಟ್ಟು 9 ಸೈಬರ್ ಮತ್ತು ಆರ್ಥಿಕ ಅಪರಾಧ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದ್ದು, ವಿವರಗಳನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ.<br><br>ಈ ಪೊಲೀಸ್ ಠಾಣೆಗಳಿಗೆ ಅಗತ್ಯವಿರುವ ಸಿಬ್ಬಂದಿಗಳು, ಕಂಪ್ಯೂಟರ್, ಪ್ರಿಂಟರ್, ಇಂಟರ್‌ನೆಟ್ ಸಂಪರ್ಕ, ದೂರವಾಣಿ, ವಾಹನ ಸೌಕರ್ಯ, ವಿದ್ಯುತ್ ಸಂಪರ್ಕ ಹಾಗೂ ಸಲಕರಣೆಗಳನ್ನು ಒದಗಿಸಲಾಗಿರುತ್ತದೆ.</td></tr>
</table>

| | | |
|---|---|---|
| ಈ | ಮೂಲ ಸೌಕರ್ಯ ಒದಗಿಸುವುದರ ಜೊತೆಗೆ ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚಲು ಅಗತ್ಯವಿರುವ ತಾಂತ್ರಿಕ ಪರಿಣಿತರು ಮಾಹಿತಿ ತಂತ್ರಜ್ಞಾನ ಕಾನೂನು ತಜ್ಞರ ಸೇವೆ ಲಭ್ಯವಾಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚಲು ಪ್ರಕರಣಗಳ ತೀವ್ರತೆಯ ಆಧಾರದ ಮೇರೆಗೆ ಅವಶ್ಯಕತೆ ಕಂಡು ಬಂದಲ್ಲಿ ಅಂತಹ ಪ್ರಕರಣಗಳಲ್ಲಿ ತಾಂತ್ರಿಕ ಪರಿಣಿತರು, ಮಾಹಿತಿ ತಂತ್ರಜ್ಞಾನ ಪರಿಣಿತರ ಸೇವೆಗಳನ್ನು ಪ್ರಕರಣಗಳಿಗೆ ಅನುಗುಣವಾಗಿ ತನಿಖಾ ವೆಚ್ಚದಡಿ ಲಭ್ಯವಿರುವ ಆರ್ಥಿಕ ವಿತ್ತಾಧಿಕಾರದ ಅನ್ವಯ ಬಳಸಿಕೊಳ್ಳಲಾದ ಸೇವೆಗಳಿಗೆ ತಗಲುವ ವೆಚ್ಚವನ್ನು ಭರಿಸಿ ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚಲು ಅವಕಾಶ ಕಲ್ಪಿಸಿಕೊಳ್ಳಲಾಗಿದೆ. |
| ಉ | ಹಾಗಿದ್ದಲ್ಲಿ, ಅಂತಹ ಪರಿಣಿತರನ್ನು ನೇಮಕ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು? | |

ಒಇ 38 ಪಿಸಿಕ್ಯೂ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

## ಅನುಬಂಧ

| ಕ್ರ.ಸಂ. | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸ್ಥಾಪಿಸಲಾದ ಸೈಬರ್ ಮತ್ತು ಆರ್ಥಿಕ ಅಪರಾಧ ಪೊಲೀಸ್ ಠಾಣೆಗಳ ವಿವರಗಳು ವಿಳಾಸದೊಂದಿಗೆ | ಒಟ್ಟು ಸಂಖ್ಯೆ |
|---|---|---|
| 1 | ಸಿ.ಇ.ಎನ್ ಪೊಲೀಸ್ ಠಾಣೆ ಕೇಂದ್ರ ವಿಭಾಗ, ಹಲಸೂರ್ ಗೇಟ್ ಪೊಲೀಸ್ ಠಾಣಾ ಮೇಲ್ಭಾಗ. ಕಾರ್ಪೋರೇಷನ್ ವೃತ್ತ ಬೆಂಗಳೂರು ನಗರ. | 1 |
| 2 | ಸಿ.ಇ.ಎನ್ ಪೊಲೀಸ್ ಠಾಣೆ ದಕ್ಷಿಣ ವಿಭಾಗ, ಮೊದಲನೇ ಮಹಡಿ, ಬನಶಂಕರಿ ಪೊಲೀಸ್ ಠಾಣೆ, ತ್ಯಾಗರಾಜನಗರ, 2ನೇ ಹಂತ, ಬನಶಂಕರಿ, ಬೆಂಗಳೂರು | 1 |
| 3 | ಸಿ.ಇ.ಎನ್ ಪೊಲೀಸ್ ಠಾಣೆ ಪಶ್ಚಿಮ ವಿಭಾಗ, ನಂ.70, 1ನೇ ಮಹಡಿ, ಬಸವೇಶ್ವರನಗರ ಪೊಲೀಸ್ ಠಾಣೆಯ ಕಟ್ಟಡ, ಕೆ ಹೆಚ್ ಬಿ ರಸ್ತೆ, ಬಿ.ಆರ್. ಅಂಬೇಡ್ಕರ್ ಮೈದಾನದ ಹತ್ತಿರ, ಬಸವೇಶ್ವರನಗರ, ಬೆಂಗಳೂರು-79. | 1 |
| 4 | ಸಿ.ಇ.ಎನ್ ಪೊಲೀಸ್ ಠಾಣೆ ಉತ್ತರ ವಿಭಾಗ, ಎರಡನೇ ಮಹಡಿ, ಬೆಂಗಳೂರು ನಗರ-560022 | 1 |
| 5 | ಸಿ.ಇ.ಎನ್ ಪೊಲೀಸ್ ಠಾಣೆ ಪೂರ್ವ ವಿಭಾಗ,ಬ್ರಾಡ್ ವೇ ರಸ್ತೆ, ಶಿವಾಜಿನಗರ ಪೊಲೀಸ್ ಠಾಣೆಯ ಮೊದಲನೇ ಮಹಡಿ, ಶಿವಾಜಿನಗರ, ಬೆಂಗಳೂರು. | 1 |
| 6 | ಸಿ.ಇ.ಎನ್ ಪೊಲೀಸ್ ಠಾಣೆ ಆಗ್ನೇಯ ವಿಭಾಗ, | 1 |
| 7 | ಸಿ.ಇ.ಎನ್ ಪೊಲೀಸ್ ಠಾಣೆ ಈಶಾನ್ಯ ವಿಭಾಗ, ನಂ. 64, ಕೆ.ಎಚ್.ಬಿ ಕಾಲೋನಿ, ಗಾಂಧೀನಗರ, ಯಲಹಂಕ, ಬೆಂಗಳೂರು-560064- | 1 |
| 8 | ಸಿ.ಇ.ಎನ್ ಪೊಲೀಸ್ ಠಾಣೆ, ವೈಟ್‌ಫೀಲ್ಡ್ ವಿಭಾಗ ವೈಟ್‌ಫೀಲ್ಡ್ ವಿಭಾಗದ ಕಛೇರಿಯ ಮೊದಲನೇ ಮಹಡಿ, ವೈಟ್‌ಫೀಲ್ಡ್ ಮುಖ್ಯ ರಸ್ತೆ, ವೈಟ್‌ಫೀಲ್ಡ್, ಬೆಂಗಳೂರು ನಗರ-560066 | 1 |
| 9 | ಸೈಬರ್ ಕ್ರೈಂ ಪೊಲೀಸ್ ಠಾಣೆ, ಬೆಂಗಳೂರು ನಗರ, ಸಿಐಆರ್ ದಕ್ಷಿಣ, ಆಡುಗೋಡಿ ಟೆಕ್ನಿಕಲ್ ಸೆಂಟರ್, ಬೆಂಗಳೂರು ನಗರ. | 1 |